ಕರ್ನಾಟಕ ಸರ್ಕಾರದ ನಡೆಗಳಿಗಳು

ವಿಷಯ: 2007-08ನೇ ಸಾಲಿನಲ್ಲಿ ಮುಂದುವರೆದ ಯೋಜನೆಗಾಗಿ ರಾಷ್ಟ್ರೀಯ ಕುಟುಂಬ ಯೋಜನೆ ಅಡಿಯಲ್ಲಿ ಬಡತನ ರೇಖೆಗಿಂತ ಕೆಳಮಟ್ಟದಲ್ಲಿರುವ ಸದಸ್ಯರು ಮೃತಪಟ್ಟಲ್ಲಿ ಅವರಿಗೆ ಅಂತ್ಯ ಸಂಸ್ಕಾರ ಸಹಾಯನಿಧಿ ಅಡಿಯಲ್ಲಿ ಜಿಲ್ಲಾಧಿಕಾರಿಗಳಿಗೆ ಅನುದಾನ ಬಿಡುಗಡೆ ಮಾಡುವ ಕುರಿತು.

ಓದಲಾಗಿದೆ: ಸರ್ಕಾರದ ಆದೇಶ ಸಂ:ಆರ್‌ಡಿ 20 ಎಂಎಸ್‌ಟಿ 06 ದಿನಾಂಕ 27-01-2007.

**ಪ್ರಸ್ತಾವನೆ:**

ರಾಜ್ಯ ಸರ್ಕಾರವು ರಾಷ್ಟ್ರೀಯ ಕುಟುಂಬ ನೆರವು ಯೋಜನೆ ಅಡಿಯಲ್ಲಿ 2007-08ನೇ ಸಾಲಿನ ಆಯವ್ಯಯದಲ್ಲಿ ರೂ.2500.00 ಲಕ್ಷಗಳನ್ನು ಒದಗಿಸಲಾಗಿರುತ್ತದೆ.ಈ ಅನುದಾನದ ಪೈಕಿ 1/3 ಭಾಗದಷ್ಟು ಆಯವ್ಯಯದ ಅನುದಾನ ಅಂದರೆ ರೂ.833.00 ಲಕ್ಷಗಳಿದ್ದು ಈ ಪೈಕಿ 'ರಾಷ್ಟ್ರೀಯ ಕುಟುಂಬ ನೆರವು ಯೋಜನೆ' ಅಡಿಯಲ್ಲಿ ಬಡತನ ರೇಖೆಗಿಂತ ಕೆಳಮಟ್ಟದಲ್ಲಿರುವ ಕುಟುಂಬದ ಸದಸ್ಯರು ಮೃತಪಟ್ಟಲ್ಲಿ ಅವರ ಅಂತ್ಯ ಸಂಸ್ಕಾರಕ್ಕಾಗಿ ಕುಟುಂಬದ ಸದಸ್ಯರಿಗೆ ರೂ.1000-00 ಗಳಂತೆ ನೀಡಲು ರಾಜ್ಯ ಸರ್ಕಾರವು ಯೋಜನೆಯನ್ನು 2006-07ನೇ ಆಯವ್ಯಯದಲ್ಲಿ ಹಮ್ಮಿಕೊಂಡು ರೂ.722.49 ಲಕ್ಷಗಳನ್ನು ಬಿಡುಗಡೆಗೊಳಿಸಲಾಗಿತ್ತು. ಈ ಯೋಜನೆಯನ್ನು 2007-08ನೇ ಸಾಲಿನಲ್ಲಿ ಮುಂದುವರೆಸಲಾಗಿದ್ದು, ಬಡತನ ರೇಖೆಗಿಂತ ಕೆಳಮಟ್ಟದಲ್ಲಿರುವ ದಿನನಿತ್ಯದ ಜೀವನ ನಡೆಸಲು ಸಾಧ್ಯವಿ[illegible] ಕುಟುಂಬಗಳಿಗೆ 2006-07ನೇ ಸಾಲಿನಲ್ಲಿ ಈ ಯೋಜನೆ ಅನುಷ್ಠಾನಕ್ಕಾಗಿಹೊರಡಿಸಲಾಗಿರುವ ಮಾರ್ಗಸೂಚಿಗಳಿಗೆ ಅನುಗುಣವಾಗಿ ಜಾರಿಗೊಳಿಸಬೇಕೆಂದು ಸೂಚಿಸಿದೆ. ಆದುದರಿಂದ 2007-08ನೇ ಸಾಲಿನ ಆಯವ್ಯಯದಲ್ಲಿ ಒದಗಿಸಿರುವ ಅನುದಾನದ ಪೈಕಿ ರೂ.130.00 ಲಕ್ಷಗಳನ್ನು ಪ್ರಥಮ ಹಂತವಾಗಿ 'ಅಂತ್ಯ ಸಂಸ್ಕಾರ ಯೋಜನೆ' ಗಾಗಿ ಬಿಡುಗಡೆಮಾಡಲು ಸರ್ಕಾರವು ತೀರ್ಮಾನಿಸಿದೆ. ಆದುದರಿಂದ ಈ ಆದೇಶ.

<u>ಸರ್ಕಾರದ ಆದೇಶ ಸಂ:ಆರ್‌ಡಿ 86 ಎಂಎಸ್‌ಟಿ 07, ದಿನಾಂಕ:23-04-2007.</u>

ಸರ್ಕಾರವು ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ರಾಜ್ಯದಲ್ಲಿ ಬಡತನರೇಖೆಗಿಂತ ಕೆಳಮಟ್ಟದಲ್ಲಿರುವ ಕೆಳಮಟ್ಟದಲ್ಲಿರುವ ಸದಸ್ಯರು ಮೃತ ಹೊಂದಿದಲ್ಲಿ ಅವರ ಅಂತ್ಯ ಸಂಸ್ಕಾರಕ್ಕಾಗಿ 'ಅಂತ್ಯ ಸಂಸ್ಕಾರ ಸಹಾಯನಿಧಿ' (Grant for funeral Expenses) ನೆರವು ಯೋಜನೆ ಅಡಿ ರೂ.1000.00 ಗಳನ್ನು ನೀಡಲು ಈಗಾಗಲೇ

ಈ ಯೋಜನೆಯ ಅನುಷ್ಠಾನಕ್ಕಾಗಿ ಹೊರಡಿಸಿರುವ ಮಾರ್ಗಸೂಚಿ/ಷರತ್ತುಗಳ ಸಂ:ಆರ್‌ಡಿ 28 ಎಂಎಸ್‌ಟಿ 2006 ದಿನಾಂಕ 8-6-2006ರನ್ವಯ ಮಂಜೂರಾತಿ ನೀಡಿದೆ.

ಈ ಯೋಜನೆಗೆ ತಗಲುವ ವೆಚ್ಚ ರೂ.135.00 ಲಕ್ಷಗಳು (ರೂಪಾಯಿ ಒಂದು ನೂರ ಮೂವತ್ತೈದು ಲಕ್ಷಗಳು ಮಾತ್ರ) ಈ ಅದೇಶಕ್ಕೆ ಲಗತ್ತಿಸಿರುವ ಅನುಬಂಧದಂತೆ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿದೆ.

ಈ ಯೋಜನೆಗೆ ತಗಲುವ ವೆಚ್ಚವನ್ನು ಲೆಕ್ಕ ಶೀರ್ಷಿಕೆ `2235-60-102-1-03-059 ಇತರೆ ವೆಚ್ಚಗಳು (ಯೋಜನೆ) ಅಡಿಯಲ್ಲಿ ಒದಗಿಸಲಾದ ಅನುದಾನದಲ್ಲಿ ಭರಿಸತಕ್ಕದ್ದು.

ಈ ಯೋಜನೆಯಡಿ ಪ್ರತಿ ಫಲಾನುಭವಿಗೆ ನೀಡುವ ಆರ್ಥಿಕ ನೆರವಿನ ಹಣವನ್ನು ಸಂಬಂಧಪಟ್ಟ ಆಯಾ ತಾಲ್ಲೂಕಿನ ತಹಸೀಲ್ದಾರರು ಮುಂಗಡವಾಗಿ ಎ.ಸಿ. ಬಿಲ್ಲಿನ ಮೂಲಕ ಆಯಾ ತಿಂಗಳಲ್ಲಿ ವಿತರಿಸಲು ಬೇಕಾಗಬಹುದಾದ ಅಂದಾಜು ಮೊತ್ತವನ್ನು ಡ್ರಾ ಮಾಡಿ ಇಟ್ಟುಕೊಂಡು ಫಲಾನುಭವಿಗಳಿಗೆ ತಕ್ಷಣ ವಿತರಿಸುವುದು ಹಾಗೂ ಪ್ರತಿ ತಿಂಗಳ ಕೊನೆಯಲ್ಲಿ ಎನ್.ಡಿ.ಸಿ. ಬಿಲ್ಲು ತಯಾರಿಸಿ ಖಜಾನೆಗೆ ಸಲ್ಲಿಸುವುದರ ಮೂಲಕ ಲೆಕ್ಕ ಪತ್ರಗಳನ್ನು ಸರಿಹೊಂದಿಸಿಕೊಳ್ಳತಕ್ಕದ್ದು.

ಈ ಯೋಜನೆಯ ಅಂಕಿ ಅಂಶಗಳ ವರದಿಗಳನ್ನು ಅದರ ವಿಮರ್ಶೆಗಾಗಿ ಸಂಬಂಧಪಟ್ಟ ತಹಸೀಲ್ದಾರ್ ರವರು ಜಿಲ್ಲಾಧಿಕಾರಿಯವರಿಗೆ ಸಲ್ಲಿಸತಕ್ಕದ್ದು. ಜಿಲ್ಲಾಧಿಕಾರಿಯವರು ಪ್ರತಿ ಮೂರು ತಿಂಗಳಿಗೊಮ್ಮೆ ಅಂಕಿ ಅಂಶಗಳ ವರದಿಯೊಂದಿಗೆ ಬಳಕೆ ಪ್ರಮಾಣ ಪತ್ರವನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂ:ಎಫ್‌ಡಿ 1 ಟಿಎಫ್‌ಪಿ 96 ದಿನಾಂಕ 10-07-1996 ರಲ್ಲಿ ಇಲಾಖೆಯ ಕಾರ್ಯದರ್ಶಿಗಳಿಗೆ ನೀಡಿರುವ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

24/4/07

(ಎಂ.ಕೆ.ನರಸಿಂಹಲು)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ(ಭೂ.ಸು.ಕೋಶ)

ಇವರಿಗೆ,

1. ಮಹಾಲೇಖಪಾಲರು (ಲೆಕ್ಕಪತ್ರ ಮತ್ತು ಲೆಕ್ಕ ತಪಾಸಣೆ) (ಎ ಮತ್ತು ಇ).ಕರ್ನಾಟಕ, ಬೆಂಗಳೂರು
2. ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ಕಂದಾಯ ಇಲಾಖೆ, ಬೆಂಗಳೂರು.

3. ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
4. ಮಾನ್ಯ ಉಪಮುಖ್ಯಮಂತ್ರಿಯವರ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
5. ಮಾನ್ಯ ಕಂದಾಯ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
6. ಪ್ರಾದೇಶಿಕ ಆಯುಕ್ತರು, ಬೆಂಗಳೂರು/ಮೈಸೂರು/ಬೆಳಗಾವಿ/ಗುಲಬರ್ಗಾ.
7. ಎಲ್ಲಾ ಜಿಲ್ಲಾಧಿಕಾರಿಗಳು.
8. ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು.
9. ಎಲ್ಲ ಜಿಲ್ಲಾ ಖಜಾನೆ ಹಾಗೂ ಉಪಖಜಾನೆ ಅಧಿಕಾರಿಗಳು.
10. ಹೆಚ್ಚುವರಿ ಪ್ರತಿ ಮತ್ತು ರಕ್ಷಾ ಕಡತ.

೯

ಸರ್ಕಾರಿ ಆದೇಶ ಸಂಖ್ಯೆ. ಆರ್.ಡಿ 86 ಎಂ.ಎಸ್.ಟಿ 2007 ಕ್ಕೆ ಅನುಬಂಧ.

| ಕ್ರಮಸಂಖ್ಯೆ | ಜಿಲ್ಲೆಗಳ ಹೆಸರು | ಬಿಡುಗಡೆ ಮಾಡಲಾದ ಅನುದಾನ ( ರೂ.ಲಕ್ಷಗಳಲ್ಲಿ) |
|---|---|---|
| 1 | ಬೆಂಗಳೂರು ನಗರ | 5.00 |
| 2 | ಬೆಂಗಳೂರು ಗ್ರಾಮಾಂತರ | 5.00 |
| 3 | ಬೆಳಗಾವಿ | 5.00 |
| 4 | ಬಳ್ಳಾರಿ | 5.00 |
| 5 | ಬೀದರ್ | 5.00 |
| 6 | ಬಿಜಾಪುರ | 5.00 |
| 7 | ಬಾಗಲಕೋಟೆ | 5.00 |
| 8 | ಚಿತ್ರದುರ್ಗ | 5.00 |
| 9 | ಚಾಮರಾಜನಗರ | 5.00 |
| 10 | ದಕ್ಷಿಣಕನ್ನಡ | 5.00 |
| 11 | ಧಾರವಾಡ | 5.00 |
| 12 | ದಾವಣಗೆರೆ | 5.00 |
| 13 | ಗುಲ್ಬರ್ಗಾ | 5.00 |
| 14 | ಗದಗ | 5.00 |
| 15 | ಹಾಸನ | 5.00 |
| 16 | ಹಾವೇರಿ | 5.00 |
| 17 | ಕೊಡಗು | 5.00 |
| 18 | ಕೋಲಾರ | 5.00 |
| 19 | ಕೊಪ್ಪಳ | 5.00 |
| 20 | ಮಂಡ್ಯ | 5.00 |
| 21 | ಮೈಸೂರು | 5.00 |
| 22 | ರಾಯಚೂರು | 5.00 |
| 23 | ಶಿವಮೊಗ್ಗ | 5.00 |
| 24 | ತುಮಕೂರು | 5.00 |
| 25 | ಉತ್ತರ ಕನ್ನಡ | 5.00 |
| 26 | ಉಡುಪಿ | 5.00 |
| 27 | ಚಿಕ್ಕಮಗಳೂರು | 5.00 |
| | ಒಟ್ಟು | 135.00 |

24/4/07

(ಎಂ.ಕೆ.ನರಸಿಂಹಲು)

ಸರ್ಕಾರದ ಅಧೀನ ಕಾರ್ಯದರ್ಶಿ,

ಕಂದಾಯ ಇಲಾಖೆ (ಭೂ ಕಂದಾಯ)